# ಪ್ರಾಚೀನರು ಕಂಡಂತೆ ಸೃಷ್ಟಿ!



ನೀವು ಶಾಲಾ ದಿನಗಳಲ್ಲೇ ಅಟ್ಲಸ್ ನೋಡಿರಬಹುದು. ಅದು ಭೂಪಟ, ಅಲ್ಲಿ ಎಲ್ಲ ಖಂಡಗಳ ಬಗ್ಗೆಯೂ ವಿವರವಿರುತ್ತದೆ. ನದಿ, ಬೆಟ್ಟ, ಸಮುದ್ರ, ಮೈದಾನ, ಪ್ರಸ್ಥಭೂಮಿ, ಕಣಿವೆ ಇತ್ಯಾದಿ. ಅಟ್ಲಸ್ ಹೆಸರಿನ ಹಿಂದೆ ಸಾಹಸದ ಕಥೆಯೊಂದಿದೆ. ಇದು ಗ್ರೀಕ್ ಪುರಾಣದಲ್ಲಿ ವರ್ಣಿತವಾಗಿದೆ. ಒಮ್ಮೆ ದೇವ–ದಾನವರಿಗೆ ಯುದ್ಧವಾದಾಗ ಇಡೀ ಸ್ವರ್ಗವನ್ನು ಆಕ್ರಮಿಸಲು ಮುಂದಾಳತ್ವ ವಹಿಸಿದ್ದವನು ದಾನವ ಅಟ್ಲಸ್. ಭೀಕರ ಹೋರಾಟದ ನಂತರ ದಾನವರು ಸೋಲುತ್ತಾರೆ. ಸ್ಯೂಸ್ ದೇವ, ಅಟ್ಲಸ್‌ನನ್ನು ಸೆರೆಹಿಡಿದು ಶಿಕ್ಷೆ ವಿಧಿಸುತ್ತಾನೆ. ಶಿಕ್ಷೆ ಏನೆಂದರೆ ತನ್ನ ಬೆನ್ನಮೇಲೆ ಇಡೀ ಸ್ವರ್ಗವನ್ನು ಹೊತ್ತು ಮಂಡಿಯೂರಿ ಕೂತಿರಬೇಕು. ಇದು ಬಲು ಘೋರ ಶಿಕ್ಷೆ. ಸ್ವರ್ಗದ ಇಡೀ ಭಾರವನ್ನು ಹೊರುವುದು ಹೇಗೆ? ಅವನಿಗೂ ಹೊತ್ತೂ ಹೊತ್ತೂ ಸಾಕಾಗಿತ್ತು. ಆ ಹೊತ್ತಿಗೆ ಗ್ರೀಕ್‌ನ ಮಹಾವೀರ ಹರ್ಕ್ಯುಲಸ್ ಬಂದ. ಈಗಲೂ ಮಹಾ ಕಠಿಣ ಸವಾಲನ್ನು ಹೇಳುವಾಗ 'ಹರ್ಕ್ಯೂಲಿಯನ್ ಟಾಸ್ಕ್' ಎನ್ನುವುದುಂಟು. ಗ್ರೀಕ್‌ನಲ್ಲಿ ಇವನ ಹೆಸರು ಹೆರಾಕ್ಲೀಸ್.

ಸ್ಯೂಸ್ ದೇವತೆ, ಅಲ್ಕ್‌ಮೀನ ಎಂಬ ಪರಮಸುಂದರಿಯ ಮೋಹಕ್ಕೆ ಒಳಗಾಗಿ ಅವಳ ಗಂಡನಿಗೂ ತಿಳಿಯದಂತೆ ಅವಳನ್ನು ಕೂಡಿ ಹುಟ್ಟಿದ ಮಗನೇ ಹರ್ಕ್ಯುಲಸ್. ಹುಟ್ಟಿನಿಂದಲೇ ಪರಾಕ್ರಮಶಾಲಿ, ಅವನು ಗ್ರೀಸ್ ದೇಶಕ್ಕೆ ಪ್ರಭುವಾಗುವ ಲಕ್ಷಣವಿತ್ತು. ಸ್ಯೂಸ್‌ನ ಮಡದಿ ಹೀರಾಗೆ ಸವತಿಯ ಮಗ ಹರ್ಕ್ಯುಲಸ್ ಕಂಡರೆ ಮಹಾ ಮತ್ಸರ. ಅವನನ್ನು ನಾಶಮಾಡುವ ಸಲುವಾಗಿ ಅವನು ಮಲಗುವ ಮನೆಗೆ ಘಟಸರ್ಪಗಳನ್ನು ಬಿಡುತ್ತಾಳೆ. ಆ ಹೊತ್ತಿಗೆ ಸ್ಯೂಸ್‌ಗೆ ಇದು ತಿಳಿದು, ದಿವ್ಯ ಬೆಳಕನ್ನು ಬಿಡುತ್ತಾನೆ. ತಾಯಿ ಬಂದು ನೋಡುತ್ತಾಳೆ. ಮಗು ಎರಡೂ ಘಟಸರ್ಪಗಳನ್ನು ಕೈಯಿಂದ ಹಿಚುಕಿಬಿಟ್ಟಿದ್ದಾನೆ. ಮುಂದೆ ಧೀರನಾಗಿ ಬೆಳೆದು ಅದ್ವಿತೀಯ ಬಿಲ್ಲುಗಾರನಾಗಿ, ಅಸಾಧಾರಣ ಕುಸ್ತಿಪಟುವಾಗಿ ರಾಜನಾಗುವ ಹಂತವನ್ನೂ ತಲುಪುತ್ತಾನೆ. ಇದನ್ನರಿತ ಹೀರಾ, ಮೈಕಿನೀ–ಟಿರೆನ್ಸ್ ಮತ್ತು ಮಿಡಿಯ ನಗರಗಳ ರಾಜ ಯೂರಿಸ್ಯೂಸ್ ಎಂಬುವನ ನೆರವು ಪಡೆದು ಅವನನ್ನು ಮುಗಿಸಲು ಯತ್ನಿಸುತ್ತಾಳೆ. ಹರ್ಕ್ಯುಲಸ್‌ನನ್ನು ಹುಚ್ಚನಾಗುವಂತೆ ಮಾಡುತ್ತಾಳೆ. ಆ ಹುಚ್ಚಿನಲ್ಲಿ ತನ್ನ ಮಕ್ಕಳನ್ನೇ ಕೊಂದ ಪಾಪ ಕಟ್ಟಿಕೊಳ್ಳುತ್ತಾನೆ. ಯೂರಿಸ್ಯೂಸ್‌ನ ಬಳಿ ದಾಸನಾಗುತ್ತಾನೆ. ಅವನು ಹರ್ಕ್ಯುಲಸ್‌ಗೆ ಹತ್ತು ಭಯಂಕರ ಸವಾಲನ್ನು ಒಡ್ಡಿ ಅದರಲ್ಲಿ ಗೆದ್ದು ಬಾ ಎಂಬ ಷರತ್ತನ್ನು ಹಾಕುತ್ತಾನೆ. ನಿಮಿಯ ಎಂಬಲ್ಲಿ ದೈತ್ಯಬಲದ ಸಿಂಹವನ್ನು ಕೊಲ್ಲುವುದು ಹತ್ತು ಸವಾಲುಗಳಲ್ಲಿ ಒಂದು. ಇಷ್ಟನ್ನೂ ಅವನು ಮುಗಿಸಿದ ಮೇಲೆ ಇನ್ನೆರಡು ಷರತ್ತುಗಳನ್ನು ಒಡ್ಡುತ್ತಾನೆ. ಹೀರಾಳ ತೋಟದಿಂದ ಚಿನ್ನದ ಸೇಬುಗಳನ್ನು ತರುವುದು ಅವನಿಗೊಡ್ಡಿದ ಸವಾಲು. ಏಕೆಂದರೆ ಘಟಸರ್ಪ ಅದರ ಮೇಲೆ ಕಣ್ಣಿಟ್ಟಿರುತ್ತದೆ. ಇನ್ನೊಂದು ಸವಾಲು, ಅಧೋಲೋಕಕ್ಕೆ ಹೋಗಿ ಅಲ್ಲಿಯ ಕಾವಲುನಾಯಿಯನ್ನು ಜೀವಂತ ಹಿಡಿದುಕೊಂಡು ಬರುವುದು.